ಕಂದಾಯ ಇಲಾಖೆ

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಪಹಣಿ:ಅಪೀಲು:154/2013-14 ದಿನಾಂಕ:07.06.2016

**ಉಪಸ್ಥಿತರು: ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ಬಿ.ಲಕ್ಮೀದೇವಿ ತಾಯಿ ಬಿ.ನಾಗಮ್ಮ,
ವಾಸ: 5ನೇ ವಾರ್ಡ್, ಕೂಡ್ಲಿಗಿ ತಾಲೂಕು,
ಬಳ್ಳಾರಿ ಜಿಲ್ಲೆ.
[ಶ್ರೀ ಎನ್.ಎಂ.ಸ್ವಾಮಿ, ವಕೀಲರು, ಕೂಡ್ಲಿಗಿ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಬಿ.ವೆಂಕಟೇಶ ತಂದೆ ಬಿ.ಹನುಮಂತಪ್ಪ,
ವಾಸ: 5ನೇ ವಾರ್ಡ್, ಕೊಟ್ಟೂರು ರಸ್ತೆ,
ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.
[ಶ್ರೀ ಕೆ.ಎಸ್.ನಾಗರಾಜ, ವಕೀಲರು, ಕೂಡ್ಲಿಗಿ]

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಕೂಡ್ಲಿಗಿ | ಕೂಡ್ಲಿಗಿ | 579/ಡಿ | 00 ಎಕರೆ 23 ಸೆಂಟ್ಸ್ |
| | | | 682/ಜಿ | 00 ಎಕರೆ 48 ಸೆಂಟ್ಸ್ |
| | | | 682/ಹೆಚ್ | 00 ಎಕರೆ 25 ಸೆಂಟ್ಸ್ |

**ಪೀಠಿಕೆ:-**

ಕೂಡ್ಲಿಗಿ ತಾಲೂಕು ಕೂಡ್ಲಿಗಿ ಹೋಬಳಿ ಕೂಡ್ಲಿಗಿ ಗ್ರಾಮದ ವಿವಾದಾಸ್ಪದ ಜಮೀನು ಸ.ನಂ.579/ಡಿ ವಿಸ್ತೀರ್ಣ: 00 ಎಕರೆ 23 ಸೆಂಟ್ಸ್ ಸ.ನಂ.682/ಜಿ ವಿಸ್ತೀರ್ಣ: 00 ಎಕರೆ 48 ಸೆಂಟ್ಸ್ ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/71/2012-13 ದಿನಾಂಕ:15.01.2013 ರನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ದಿನಾಂಕ:19.11.2013 ರಂದು ಅಪೀಲುದಾರರ ಪರ ವಕೀಲರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:04.02.2014 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಾದಿಪರ ವಕೀಲರು ದಿನಾಂಕ:17.03.2016 ರಂದು ಸದರಿ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಒತ್ತಾಯಿಸದೇ ಇರುವ ಮೆಮೋವನ್ನು ದಾಖಲಿಸುತ್ತಾ, ಪ್ರಕರಣವನ್ನು ಇದೇ ಹಂತದಲ್ಲಿ ವಜಾಗೊಳಿಸಲು ಕೋರಿರುತ್ತಾರೆ. ಆದುದರಿಂದ, ಈ ಕೆಳಕಂಡಂತೆ

**-: ಆದೇಶ:-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ವಾದಿಪರ ವಕೀಲರು ಸದರಿ ಪಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿ ಮನವಿ ಸಲ್ಲಿಸಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ: ಪ್ರತಿವಾದಿಗಳಿಗೆ

**ಪ್ರತಿಯನ್ನು:-** ತಹಶೀಲ್ದಾರರು, ಕೂಡ್ಲಿಗಿ ಇವರಿಗೆ ಸಂಬಂಧಿಸಿದಂತೆ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.